ಮೆ: ಸ್ವಾವ್‌ಸನ್ ಡಿಸ್ಟಿಲ್ ಪ್ರೈವೆಟ್ ಲಿಮಿಟೆಡ್, ಇವರು ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕ, ಕೊಕಟನೂರು ಅಡ್ಡ ರಸ್ತೆ, ಅಥಣಿ–ವಿಜಯಪುರ ರಸ್ತೆ, ಸರ್ವೆ ನಂ: 870/6, 870/1, 871/2, 870/7 ಮತ್ತು 874/3 ಇಲ್ಲಿ ಹೊಸದಾಗಿ 100 ಕೆಎಲ್‌ಪಿಡಿ ಸಾಮರ್ಥ್ಯದ (ಗ್ರೇನ್ ಬೇಸ್ಡ್) ಎಥನಾಲ್/ಇಎನ್‌ಎ, ಉತ್ಪಾದನೆ ಮತ್ತು ಗಂಟೆಗೆ 3 ಮೆಗಾ ವ್ಯಾಟ್ ಉತ್ಪಾದನಾ ಸಾಮರ್ಥ್ಯದ ಕೋಜನರೇಷನ್ ಘಟಕವನ್ನು ಹಾಗೂ 5 ಟಿಪಿಡಿ ಕಾರ್ನ್ ಐಯಿಲ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಹಿನ್ನೆಲೆಯಲ್ಲಿ ನಡೆದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.

ದಿನಾಂಕ : 24–06–2020.

ವೇಳೆ : ಬೆಳಿಗ್ಗೆ 11:00 ಘಂಟೆ,

ಸ್ಥಳ : ಮೆ: ಸ್ವಾವ್‌ಸನ್ ಡಿಸ್ಟಿಲ್ ಪ್ರೈವೆಟ್ ಲಿಮಿಟೆಡ್, ಕೊಕಟನೂರು ಅಡ್ಡ ರಸ್ತೆ, ಅಥಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ.

ಮೆ: ಸ್ವಾವ್‌ಸನ್ ಡಿಸ್ಟಿಲ್ ಪ್ರೈವೆಟ್ ಲಿಮಿಟೆಡ್, ಇವರು ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕ, ಕೊಕಟನೂರು ಅಡ್ಡ ರಸ್ತೆ, ಅಥಣಿ–ವಿಜಯಪುರ ರಸ್ತೆ, ಸರ್ವೆ ನಂ: 870/6, 870/1, 871/2, 870/7 ಮತ್ತು 874/3 ಇಲ್ಲಿ ಹೊಸದಾಗಿ 100 ಕೆಎಲ್‌ಪಿಡಿ ಸಾಮರ್ಥ್ಯದ (ಗ್ರೇನ್ ಬೇಸ್ಡ್) ಎಥನಾಲ್/ಇಎನ್‌ಎ, ಉತ್ಪಾದನೆ ಮತ್ತು ಗಂಟೆಗೆ 3 ಮೆಗಾ ವ್ಯಾಟ್ ಉತ್ಪಾದನಾ ಸಾಮರ್ಥ್ಯದ ಕೋಜನರೇಷನ್ ಘಟಕವನ್ನು ಹಾಗೂ 5 ಟಿಪಿಡಿ ಕಾರ್ನ್ ಆಯಿಲ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 24–06–2020 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ: ಸ್ವಾವ್‌ಸನ್ ಡಿಸ್ಟಿಲ್ ಪ್ರೈವೆಟ್ ಲಿಮಿಟೆಡ್, ಕೊಕಟನೂರು ಅಡ್ಡ ರಸ್ತೆ, ಅಥಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ–1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ–2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ–3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ–4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ–5 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : | ಅನುಬಂಧ–6 |
| ಕಾರ್ಖಾನೆಯ ಪ್ರತಿನಿಧಿಗಳು ಸಾರ್ವಜನಿಕರ ಅಹವಾಲಿಗೆ ನೀಡಿದ ಲಿಖಿತ ಉತ್ತರ | : | ಅನುಬಂಧ–7 |

**ಪೀಠಿಕೆ:**

ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ಭಾರತ ಸರಕಾರ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಪರಿಸರ ಕುರಿತು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಮತ್ತು ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರು ಸದರಿ ಯೋಜನೆಯ Terms of Reference ಅನ್ನು ದಿನಾಂಕ 16-09-2019 ರಂದು ಅಂತಿಮಗೊಳಿಸಿ ಅದರಂತೆ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಾಯ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವರು ಸದರಿ ಯೋಜನೆ (ಟಿ ಓ ಆರ್) ಅನ್ನು ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು **ಮೆ: ಸ್ವಾಪ್‌ಸನ್ ಡಿಸ್ಟಿಲ್ ಪ್ರೈವೆಟ್ ಲಿಮಿಟೆಡ್, ಕೊಕಟನೂರು ಅಡ್ಡ ರಸ್ತೆ, ಅಥಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ.** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 24-02-2020 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ಉದ್ದೇಶಿತ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ಪತ್ರಿಕೆಗಳಾದ "ವಿಜಯ ಕರ್ನಾಟಕ" (ಕನ್ನಡ) ,"ದಿ ಹಿಂದೂ" (ಆಂಗ್ಲ) ಭಾಷೆಯಲ್ಲಿ ದಿನಾಂಕ: 25-05-2020 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ವಿಜಯ ಕರ್ನಾಟಕ" (ಕನ್ನಡ) ಪತ್ರಿಕೆಯಲ್ಲಿ ದಿನಾಂಕ: 28-05-2020ರಂದು, ದಿನ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 24-06-2020 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ. ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು **ಶ್ರೀ ಅಶೋಕ ದುಡಗುಂಟಿ** ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, **ಶ್ರೀ. ವಿಜಯಕುಮಾರ ಕಡಕಬಾವಿ,** ವಲಯ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ ಧಾರವಾಡ, ಮತ್ತು ಅಥಣಿ ತಹಶೀಹಲ್ದಾರ ರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ನಾಗರಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಏಳು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಎನವಿರೋನಾಮೆಂಟಲ ಹೆಲ್ತ್ & ಸೆಫ್ಟಿ ಕನ್ಸಲಟಂಟ್ ಪ್ರೈವೆಟ್ ಲಿಮಿಟೆಡ್ ಬೆಂಗಳೂರ ನವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

1. ಶ್ರೀ ದರೆಪ್ಪಾ ಬಸಪ್ಪ ತಕ್ಕನ್ನವರ, ವಕೀಲರು, ಸವದಿ ಗ್ರಾಮ:

ಈ ಸಭೆಯ ಅಧ್ಯಕ್ಷತೆ ವಹಿಸಿದ ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಮಾಲಿನ್ಯ ನಿಯಂತ್ರಣ ಅಧಿಕಾರಿಗಳು ಹಾಗೂ ಇಲ್ಲಿ ನೆರದಿರತಕ್ಕಂತಹ ಸುತ್ತ ಮುತ್ತಲಿನ ಗ್ರಾಮದ ರೈತ ಬಾಂಧವರೆ ನಾನು ಇದೇ ಕೊಕಟನೂರ ಜಿಲ್ಲಾ ಪಂಚಾಯತ ವ್ಯಾಪ್ತಿಯ ಸವದಿ ಗ್ರಾಮದ ರಹವಾಸಿ, ನನ್ನ ಹೆಸರು ಶ್ರೀ ದರೆಪ್ಪಾ ಬಸಪ್ಪಾ ತಕ್ಕನ್ನವರ, ವೃತ್ತಿಯಲ್ಲಿ ನ್ಯಾಯವಾದಿಯಾಗಿ ಅಥಣಿ ನ್ಯಾಯಾಲಯದಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ ಎಂದು ತಮ್ಮ ಪರಿಚಯವನ್ನು ಮಾಡಿಕೊಂಡರು. ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಬಂದಿದ್ದೇನೆ, ಒಂದು ದೇಶ ಅಭಿವೃದ್ಧಿಯಾಗಬೇಕಾದರೆ, ದೇಶ ಇತರ ರಾಷ್ಟ್ರಗಳೊಂದಿಗೆ ಮುಂದುವರೆಯಬೇಕು, ಎಲ್ಲಾ ರಾಷ್ಟ್ರಗಳಲ್ಲಿ ಭಾರತ ಪ್ರಜ್ವಲಿಸಬೇಕು ಅಂದರೆ ಮಹಾತ್ಮಾ ಗಾಂಧಿಯವರು ಹೇಳಿದ ಹಾಗೆ ದೇಶದಲ್ಲಿ ಗುಡಿ ಕೈಗಾರಿಕೆಗಳಿಗೆ ಉತ್ತೇಜಿಸಬೇಕು. ಇವತ್ತಿನ ದಿನಗಳಲ್ಲಿ ಗುಡಿ ಕೈಗಾರಿಕೆಗಳಿಗೆ ಪ್ರಾಧಾನ್ಯ ಕೊಡುವ ಮೂಲಕ ಈ ರೀತಿಯಾದಂತಹ ಕಾರ್ಖಾನೆಗಳು ಅಭಿವೃದ್ಧಿ ಆಗಬೇಕು. ಅವುಗಳಿಂದ ರಾಷ್ಟ್ರದ ವರಮಾನ ಹೆಚ್ಚಾಗಬೇಕು ಹಾಗೂ ದೇಶದ ಅಭಿವೃದ್ಧಿ ಆಗಬೇಕು ಎಂಬ ಆಲೋಚನೆಗಳನ್ನು ಇಟ್ಟುಕೊಂಡಿರತಕ್ಕಂತಹ ಉದ್ದೇಶದ ಅಡಿಯಲ್ಲಿ ನಮ್ಮ ಭಾಗದಲ್ಲಿ ಈ ಕಾರ್ಖಾನೆ ಪ್ರಾರಂಭ ಮಾಡುತ್ತಿದ್ದಾರೆ. ಇದರಿಂದ ನಮಗೆ ಅತ್ಯಂತ ಒಳ್ಳೆಯ ಭವಿಷ್ಯ ಇದೆ ಎಂದರೆ ತಪ್ಪಾಗಲಿಕ್ಕಿಲ್ಲಾ. ರೈತರು ಬೆಳೆದಿರತಕ್ಕಂತಹ ಬೆಳೆಗಳ ಆಧಾರದ ಮೇಲೆ ಕಚ್ಚಾ ವಸ್ತು ಅಂದರೆ ರೈತರ ಬೆಳೆ ಆ ದೃಷ್ಠಿಯಲ್ಲಿ ಈ ನೆರೆ ಹೊರೆ ಇರತಕ್ಕಂತಹ ರೈತ ಬಂಧುಗಳಿಗೆ ತಮ್ಮ ಕಾಳು ಕಡಿಗಳನ್ನು ಅಂದರೆ ಗೊಂಜಾಳ (ಮೆಕ್ಕೆ ಜೋಳ) ಇಲ್ಲೇ ಮಾರಾಟ ಮಾಡುವುದರ ಮೂಲಕ ಸಾರಿಗೆ ವೆಚ್ಚ ಕಡಿಮೆಗೊಳ್ಳುತ್ತದೆ. ಇಲ್ಲಿಯವರೆಗೆ ಸಾಂಗ್ಲಿ ಹಾಗೂ ಮಹಾರಾಷ್ಟ್ರ ರಾಜ್ಯಗಳಿಗೆ ರವಾನಿಸುವ ಸಂದರ್ಭದಲ್ಲಿ ಕ್ವಿಂಟಾಲ್‌ಗೆ ಸುಮಾರು 500ರೂ ದಿಂದಾ 600ರೂ ಗಳೂ ಸಹ ಸಿಗುತ್ತಿರಲಿಲ್ಲಾ. ಇವತ್ತಿನ ದಿವಸ ಈ ಒಂದು ಸ್ಥಳದಲ್ಲಿ ಇಂತಹ ಕಾರ್ಖಾನೆ ಬೆಳೆದು ನಿಂತರೆ ಭವಿಷ್ಯತ್ತಿನಲ್ಲಿ ನಮ್ಮ ಮಕ್ಕಳಿಗೆ ಹಾಗೂ ನಮ್ಮ ಮುಂದಿನ ಪಿಳೀಗೆಗೆ ಕೂಡಾ ಒಂದು ಉದ್ಯೋಗದ ಅವಕಾಶ ಬರಬಹುದು, ರೈತರು ಬೆಳೆದಿರತಕ್ಕಂತಹ ಬೆಳೆಗೆ ಉತ್ತಮ ಬೆಲೆ ಸಿಗುವಂತಾಗಬಹುದು, ಅನೇಕ ಅಭಿವೃದ್ಧಿ ಪರ ಕೆಲಸಗಳನ್ನು ಕಾರ್ಖಾನೆಯವರು ಹಮ್ಮಿಕೊಳ್ಳುತ್ತಿರುವುದು ಬಹಳಷ್ಟು ಹೆಮ್ಮೆ ಅನಿಸುತ್ತಿದೆ. ಒಟ್ಟಾರೆ ಈ ಒಂದು ಸಂದರ್ಭದಲ್ಲಿ ನಾನು ಒಂದು ವಿನಂತಿಯನ್ನು ಅಧ್ಯಕ್ಷರಲ್ಲಿ ಮಾಡಿಕೊಳ್ಳುತ್ತೇನೆ, ಏನೆಂದರೆ ಈಗ ತಾವು ನಡೆಸಿರತಕ್ಕಂತಹ ಒಂದು ಸಭೆ 2006ರ ಸರ್ಕಾರದ ನಿಯಮಾವಳಿಯಡಿಯಲ್ಲಿ ಇದೆ ಎಂದು ಹೇಳಿರುವಿರಿ, ಅದೇ Ministry of Environmental & Forest ರವರು 14th September-2006 ರಲ್ಲಿ ಹೊರಡಿಸಿರುವಂತಹ ಒಂದು ನೋಟಿಫಿಕೇಶನ ಇದೆ. ದಯವಿಟ್ಟು ತಾವು ಅದನ್ನು ಗಮನಿಸಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ನಡೆಯತಿರತಕ್ಕಂತಹ ಈ ಸಭೆ ಅದರೊಳಗೆ ನಿಯಮಾವಳಿ ಇರುವಂತಹ, ಸೆಕ್ಷೆನ್ 6ರ ಪ್ರಕಾರ Proceedings ಜಾರಿಗೆ ಆಗತಾಯಿದೆ, ಅದೇ ಸೆಕ್ಷೆನ್ 6 ರಲ್ಲಿ, ಸಬ್‌ಸೆಕ್ಷೆನ್ 6.4 ರಲ್ಲಿ ಹೇಳುವ ಹಾಗೆ Persons present at the venue shall be granted the apportunity to seek information or clarifications on the project from the applicant. The summery of the public hearing proceedings accurately reflecting all the views and concernes expressed shall be recorded by the representative of the state pollution control board (SPCB) or UTPCC and read over the audience the end of the proceedings explaining the contents in the local/vernacular language and the agreed minutes shall be signed by the District Magestrate/ District Collector/ Deputy Commissioner or his or her representative on the same day and forwarded to the

SPCB/UTPCC. ಅಂದರೆ ಇವತ್ತು ನಡೆಯತಕ್ಕಂತಹ Proceedings ಗಳನ್ನು ತಾವು ಇಲ್ಲೇ ಅದನೆಲ್ಲಾ ಬರೆದು ಇಲ್ಲೇ ಸಹಿ ಹಾಕಿ ಪೂರ್ಣಗೊಳಿಸಬೇಕೆಂದು ಈ ಸಭೆಯ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಎಂದು ತಮ್ಮ ಅನಿಸಿಕೆಯನ್ನು ತಿಳಿಸಿದರು.

2. **ಶ್ರೀ ಶೇಖರ ಸದಾಶಿವ ಕನಕರೆಡ್ಡಿ, ಕೊಕಟನೂರ ಗ್ರಾಮ:**

ಈ ಫ್ಯಾಕ್ಟರಿ ಆಗುವುದರಿಂದ ನಮಗೆಲ್ಲಾ ಒಳ್ಳೆಯದು ಆಗುತ್ತದೆ ಎಂದು ವಿಶ್ವಾಶಿಸಿ ನಾವು ಇದನ್ನು ಆಗಲೇ ಬೇಕೆಂದು ತಿರ್ಮಾನಿಸಿಸುತ್ತೇವೆ ದಯವಿಟ್ಟು ಎಲ್ಲರಿಗೂ ಒಂದು ಮನವಿ ಮಾಡಿಕೊಳ್ಳುತ್ತೇನೆ. ಈ ಒಂದು ಫ್ಯಾಕ್ಟರಿ ಆದರೆ ನಮಗೆ ಎಲ್ಲಾ ಒಳ್ಳೆಯದಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

3. **ಶ್ರೀ ಶಿವಕುಮಾರ ಅಪರಾಜ, ಬುರಲಟ್ಟಿ ಗ್ರಾಮ:**

ಈಗ ಕೊಕಟನೂರ ಗ್ರಾಮದ ಬಳಿ ಇರತಕ್ಕಂತಹ ಜಾಗದಲ್ಲಿ ಡಿಸ್ಟಿಲರಿ ಪ್ಲಾಂಟ ಕಟ್ಟಡವನ್ನು ಪ್ರಾರಂಭ ಮಾಡಲಿಕ್ಕೆ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ, ಈ ಯೋಜನೆಯಿಂದ ಈ ಅಕ್ಕ ಪಕ್ಕದಲ್ಲಿ ಇರುವಂತಹ ಎಲ್ಲಾ ಗ್ರಾಮಗಳಿಗೆ ಅನುಕೂಲವಾಗುತ್ತದೆ ಎಂದು ಒಂದು ಭಾವನೆ, ಇನ್ನೊಂದು ಏನೆಂದರೆ ಈ ಬಾರಿ ಕೋವಿಡ-19 ಇರುವುದರಿಂದ ಮಹಾರಾಷ್ಟ್ರಾ & ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸುತ್ತಿರುವ ಈ ಭಾಗದ ಎಲ್ಲಾ ಟೆಕ್ನಿಕಲ್ ಹ್ಯಾಂಡ್ಸಗಳು ಅಲ್ಲಿಯ ತಮ್ಮ ತಮ್ಮ ಉದ್ಯೋಗವನ್ನು ಕಳೆದುಕೊಂಡು ನಮ್ಮ ಗ್ರಾಮಗಳಿಗೆ ಬಂದಿದ್ದಾರೆ, ಅಂತವರಿಗೆ ಇಲ್ಲಿ ಸುಮಾರು 100-150 ಜನರಿಗೆ ಕೈಗಾರಿಕೆ ಕಾರ್ಯನಿರ್ವಹಿಸುವ ಸಮಯದಲ್ಲಿ ಹಾಗೂ ಸುಮಾರು 500 ಜನರಿಗೆ ಪ್ರೊಜೆಕ್ಟ ಸ್ಟಾರ್ಟ ಮಾಡುವುದರಲ್ಲಿ ಕೆಲಸ ಸಿಗುತ್ತದೆ. ಏನೆಂದರೆ 50% ಕಿಂತ ಹೆಚ್ಚು ಈ ಸ್ಥಳೀಯ ಮಟ್ಟದಲ್ಲಿ ನಮ್ಮ ಎಲ್ಲಾ ಯುವಕ ಕಾರ್ಮಿಕರಿಗೆ & ಟೆಕ್ನಿಕಲ್ ಹ್ಯಾಂಡಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು ಮತ್ತು ಈ ನಿಟ್ಟಿನಲ್ಲಿ ಯಾವ ರೀತಿಯ ಸರ್ಕಾರದ ಮಾರ್ಗಸೂಚಿಗಳಿವೆ ಅದನ್ನ ಇಲ್ಲಿ ಇರತಕ್ಕಂತಹ ಅಧಿಕಾರಿಗಳು ನಮ್ಮ ರೈತರಿಗೆ ತಿಳಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

4. **ಶ್ರೀ ಅಪ್ಪಾಸಾಬ ಪರಸಪ್ಪಾ ಜಮಖಂಡಿ, ಕೊಕಟನೂರ ಗ್ರಾಮ:**

ಸನ್ಮಾನ್ಯ ಅಧ್ಯಕ್ಷರೇ ಇಲ್ಲಿ ಕಾರ್ಖಾನೆಯನ್ನು ಹಮ್ಮಿಕೊಂಡಿರುವ ಸ್ಥಳೀಯ ಜಾಗದಲ್ಲಿ ಎಲ್ಲಾ ರೈತರು ತಮ್ಮ ಮಕ್ಕಳೆಂದು ತಿಳಿದು ಕೇಲಸವನ್ನು ಸ್ಥಳೀಯ ರೈತರಿಗೆ ಕೊಡಬೇಕೆಂದು ಹಾಗೂ ಸ್ಥಳೀಯ ಜಮೀನುಗಳಿಗೆ ಯಾವುದೇ ತರಹದ ಲುಕ್ಸಾನ್ ಆಗದಂತೆ ನೋಡಿಕೊಂಡು ಹೋಗಬೇಕೆಂದು ವಿನಂತಿ ಮಾಡಿಕೊಂಡರು.

5. **ಶ್ರೀ ಚಂದ್ರಶೇಖರ ಎಸ್ ನ್ಯಾಮಗೌಡರ, ಐಗಳಿ ಗ್ರಾಮ:**

ಈ ಒಂದು ಪ್ರಸ್ತಾವಿತ ಸ್ಯಾವಸನ್ ಇಂಡಸ್ಟ್ರಿ ಸ್ಥಾಪನೆ ಸಂದರ್ಭದಲ್ಲಿ, ಈ ಭಾಗದ ಎಲ್ಲಾ ಜನರು ಸುತ್ತ ಮುತ್ತಲಿನ ಅಭಿಪ್ರಾಯ ತಿಳಿಸಿಕೊಳ್ಳುವುದಕ್ಕೆ ಕೂಡಿರುವ ಸಂದರ್ಭದಲ್ಲಿ ಕೂಡಿರುವಂತಹ ಎಲ್ಲಾ ಜನರಿಗೆ ನಮಸ್ಕರಿಸುತ್ತಾ, ಈ ಒಂದು ಪ್ರಾಸ್ತಾಮಿಕ ಇಥೆನಾಲ್ ಘಟಕ ಮತ್ತು ಕೋಜನರೆಷನ್ ಘಟಕ ಸ್ಥಾಪನೆ ಮಾಡಲು, ಮ್ಯಾನೆಜಮೆಂಟ ಕಮಿಟಿಯವರು ಮಾಡಿದ ಪ್ರಸ್ತಾವನೆಯು ಅತ್ಯಂತ ಸೂಕ್ತವಾಗಿದೆ ಎಂದು ಅನಿಸುತ್ತದೆ. ಏಕೆಂದರೆ ಅಥಣಿ ಭಾಗ ಈ ಕರ್ನಾಟಕದಲ್ಲಿ ಉತ್ತರ ಕರ್ನಾಟಕ ಇಂಡಸ್ಟ್ರೀ ದೃಷ್ಟಿಯಿಂದ ಹಿಂದುಳಿದಿರುವಂತಹ ಪ್ರದೇಶ ಇದ್ದು ಅದರಲ್ಲಿ ಅಥಣಿ ತಾಲ್ಲೂಕಾದಲ್ಲಿ ಇಂಡಸ್ಟ್ರೀ ಬಹಳ ಕಡಿಮೆ ಇರುತ್ತದೆ. ಪೂರ್ವ ಭಾಗದಲ್ಲಿ ಯಾವುದೇ ಇಂಡಸ್ಟ್ರೀ ಇಲ್ಲಾ, ಇಂಡಸ್ಟ್ರೀ ಆಗುವುದರಿಂದ ನಮ್ಮ ಈ ಪೂರ್ವಭಾಗಕ್ಕ ಬಹಳ ಅನುಕೂಲ ಆಗುತ್ತದೆ. ಈ ಇಂಡಸ್ಟ್ರಿ ಮಾಡುವುದರಿಂದ ಸ್ಥಳೀಯರಿಗೆ ಹೆಚ್ಚು ಪ್ರಾತಿನಿದ್ಯ ಕೊಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ ಯಾಕಂದರೆ ಇವರೆಲ್ಲಾ ರೈತಾಪಿ ವರ್ಗದವರು ಇದ್ದು ಇಲ್ಲಿ ಸ್ಥಳೀಯರಿಗೆ ಅನೂಕೂಲ ಮಾಡಿಕೊಡುವುದು ಮತ್ತು ಇಲ್ಲಿನ ಮೆಕ್ಕೆ ಜೋಳ ರೈತರಿಂದ ಮೆಕ್ಕೆ ಜೋಳ ಖರೀದಿಸಿ ಒಂದು ಸೂಕ್ತ ಬೆಲೆಯನ್ನು ಕೊಡಬೆಕಂತಾ ಕೇಳಿಕೊಳ್ಳುತ್ತೇನೆ. ಇದರಿಂದ ರೈತರಿಗೆ ಉಪಯೋಗ ಆಗುತ್ತದೆ ಅಂತಾ ಅನಿಸುತ್ತದೆ. ಈ ಇಂಡಸ್ಟ್ರಿ ಮಾಡುವುದರಿಂದ ನಮ್ಮ ಭಾಗಕ್ಕೆ ಹೆಚ್ಚು ಅನುಕೂಲ ಹೇಗೆಂದರೆ, ಸ್ಥಳೀಯರಿಗೆ ಹೆಚ್ಚು ಮಿಸಲಾತಿ ಕೊಡಿಸಿ ಉದ್ಯೋಗದಲ್ಲಿ ತಾವು ಅನುಕೂಲ ಮಾಡಿಕೊಡಬೇಕು. ಈ ಇಂಡಸ್ಟ್ರಿಯವರು ಈಗಾಗಲೆ ಪ್ರಸ್ತಾವಿಕ ಇಂಡಸ್ಟ್ರಿಯ ಬಗ್ಗೆ ಪೋಲುಷನ ಕಂಟ್ರೋಲ

ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ಆದರು ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಅದು ಒಂದ ಜೀರೊ ಪುಲುಷನ್ ಅಂದರೆ ಯಾವುದೆ ತರಹ ಪರಿಸರ ಮಾಲಿನ್ಯ ಆಗಲಿ, ಹವಾಮಾನ ಆಗಲಿ ಮತ್ತು ಧೂಳಿನಿಂದಾಗಲಿ ಯಾವುದೆ ತರಹನಾಗಿ ತಾವು ಹೇಳಿದ ಹಾಗೆ ಪರಿಸರಕ್ಕ ಹಾನಿ ಆಗದ ಹಾಗೆ ನೋಡಿಕೊಳ್ಳಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

6. **ಶ್ರೀ ವಿಶ್ವನಾಥ ತೆಲಸಂಗ, ಬಡಚಿ ಗ್ರಾಮ:**

ಈವತ್ತಿನ ಈ Savson Distil Pvt Ltd ಪರಿಸರ ಕುರಿತು ಸಾರ್ವಜನಿಕ ಸಭೆಯಲ್ಲಿ, ಅಪರ ಜಿಲ್ಲಾಧಿಕಾರಿಗಳ ಮುಖಾಂತರ ಕೇಳಿಕೊಳ್ಳುವುದೇನೆಂದರೆ ZLD Technology ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಅದರ ಪಾಲನೇ ಆಗಬೇಕು. ಮುಂದೆ ಇಂತಹ ಯಾವುದೇ Projectಗೆ ಈ Techanology ವನ್ನು ಅಳವಡಿಸಿ ಅಂತ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೋಳ್ಳುತ್ತೇನೆ.

7. **ಶ್ರೀ ಸಂತೋಷ ಸಾವಡಕರ, ರಾಮತೀರ್ಥ ಗ್ರಾಮ:**

ಅಥಣಿ ತಾಲ್ಲೂಕಿನಲ್ಲಿ ಈ ಸುತ್ತಮುತ್ತಲಿನ ಪ್ರದೇಶದಲ್ಲಿ ಜಮೀನುಗಳಿಗೆ ಬಹಳಷ್ಟು ಕಡಿಮೆ ರೇಟ್ ಇತ್ತು ಸುಮಾರು ಐದು ವರ್ಷಗಳ ಹಿಂದೆ ಈ ಕೆನಾಲ ವರ್ಕ ಆಗುವುದರಿಂದ ಏಕರೆಗೆ ಹತ್ತೂ ಲಕ್ಷದವರೆಗೂ ರೇಟ್ ಬಂದಿದೆ. ಇಂತಹ ದೊಡ್ಡ-ದೊಡ್ಡ ಫ್ಯಾಕ್ಟರಿಗಳು ಆಗುವುದರಿಂದ ಸುತ್ತ-ಮುತ್ತಲಿನ ಜನರು ಅಡಹಳ್ಳಿ, ಕೊಹಳ್ಳಿ, ಕೊಟ್ಟಲಗಿ, ಕಕಮರಿ ಇಲ್ಲಿ ಇರುವ ಜನರು ಗೋವಾ ಹಾಗೂ ಮಹಾರಾಷ್ಟ್ರಕ್ಕೆ ದುಡಿಯಲು ಹೋಗುವ ಜನ ಇದ್ದು, ಇಲ್ಲಿ ಇಂತಹ ಫ್ಯಾಕ್ಟರಿಯಲ್ಲಿ ನೂರಾರು ಜನರಿಗೆ ಉದ್ಯೋಗವಕಾಶ ಸಿಗುತ್ತದೆ ಮತ್ತು ಅದರ ಜೊತೆಗೆ ಈ ಸುತ್ತ ಮುತ್ತಲಿನ ಜಮೀನುಗಳಿಗೆ ಒಂದು ಯೋಗ್ಯವಾದ ದರ ಬರುತ್ತದೆ. ಅದಕ್ಕೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇಂತಹ ದೊಡ್ಡ-ದೊಡ್ಡ ಪ್ರೋಜೆಕ್ಟಗಳಿಗೆ ಬೇಗ ಅನುಮತಿಕೊಟ್ಟು ಫ್ಯಾಕ್ಟರಿ ಸ್ಟಾರ್ಟ ಮಾಡಲಿಕ್ಕೆ ಅನೂಕೂಲ ಮಾಡಿ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

8. **ಶ್ರೀ ಅಪ್ಪು ನ್ಯಾಮಗೌಡರ, ದಬದಾಬಾಡಿ ಗ್ರಾಮ:**

ಪರಿಸರ ಮಾಲಿನ್ಯದ ಬಗ್ಗೆ ಸಾಕಷ್ಟು ಸವಿಸ್ತಾರವಾಗಿ ಹೇಳಿದ್ದೀರಿ, ಅದರ ಬಗ್ಗೆ ಎರಡು ಮಾತಿಲ್ಲಾ. ಆಡಳಿತ ಮಂಡಳಿಯಲ್ಲಿ ವಿನಂತಿ ಏನೆಂದರೆ ನಮ್ಮಲ್ಲಿ ಸಾಕಷ್ಟು ನಿರುದ್ಯೋಗ ಸಮಸ್ಯೆ ಇದೆ, ಅದಕ್ಕೆ ಸ್ಥಳೀಯರಿಗೆ ಉದ್ಯೋಗದಲ್ಲಿ ಹೆಚ್ಚಿನ ಅವಕಾಶ ಕೊಡಬೇಕು ಮತ್ತು ಇಲ್ಲಿ ಕೆನಾಲ ಇರುವುದರಿಂದ ಹೆಚ್ಚಾಗಿ ಗೊಂಜಾಳ ಬೆಳೆಯನ್ನು ರೈತರು ಬೆಳೆಯುತ್ತಿದ್ದಾರೆ, ಎಲ್ಲಾ ರೈತರು ಬೆಳೆದಂತಹ ಗೊಂಜಾಳವನ್ನು ತಮ್ಮ ಕಾರ್ಖಾನೆಗೆ ತೆಗೆದುಕೊಳ್ಳಬೇಕು. ಇಲ್ಲಿನ ರೈತರ ಮಕ್ಕಳಿಗೆ ಉದ್ಯೋಗದಲ್ಲಿ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳಲ್ಲಿ ನನ್ನ ವಿನಂತಿ ಮತ್ತು ಆದಷ್ಟು ಬೇಗನೆ ಮಂಜೂರಾತಿ ಕೊಟ್ಟು ಈ ಕಾರ್ಖಾನೆಯನ್ನು ಪ್ರಾರಂಭಿಸಿ, ಈ ಎಲ್ಲಾ ಸುತ್ತ ಮುತ್ತಲಿನ ಗ್ರಾಮದ ರೈತರ ಅಭಿವೃದ್ಧಿಗೆ ಕೂಡಲೇ ಕ್ರಮಕೈಗೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

9. **ಶ್ರೀ ದುಂಡಪ್ಪ ದೊಡಮನಿ, ಐಗಳಿ ಗ್ರಾಮ:**

ಈ ನಮ್ಮ ಗ್ರಾಮದ ಪೂರ್ವ ಭಾಗದ ಬರಗಾಲ ಪೀಡಿತ ಪ್ರದೇಶದಲ್ಲಿ ಇಂತಹ ಒಂದು ಕಾರ್ಖಾನೆ ಸ್ಥಾಪನೆ ಆಗುವುದರಿಂದ ಇಲಿನ್ನ ಎಲ್ಲಾ ನಮ್ಮ ರೈತರ ಅಭಿವೃದ್ಧಿ ಆಗಲಿಕ್ಕೆ ಇದು ಒಂದು ಉತ್ತಮವಾದ ಅವಕಾಶ ಎಂದು ನನ್ನ ಅನಿಸಿಕೆ. ಈ ಕಾರ್ಖಾನೆ ಆಗುವುದರಿಂದ ಈ ಭಾಗದಲ್ಲಿ ಗೋವಿನ ಜೋಳ ಹಾಗೂ ಕಬ್ಬು ಪ್ರಮುಖ ಬೆಳೆಯಾಗಿದ್ದು, ನಮ್ಮ ತಾಲ್ಲೂಕಿನ ಪೂರ್ವ ಭಾಗದಲ್ಲಿ ಈಗಾಗಲೆ ಸಕ್ಕರೆ ಕಾರ್ಖಾನೆಗಳು ಅಭಿವೃದ್ಧಿ ಆಗುತ್ತಿವೆ.

ಅದೇ ರೀತಿ ಪೂರ್ವ ಭಾಗದಲ್ಲಿ ಇಂತಹ ಕಾರ್ಖಾನೆಗಳು ಸ್ಥಾಪನೆಗೊಂಡರೆ ನಮ್ಮ ಪೂರ್ವ ಭಾಗದ ರೈತರಿಗೆ ಹಾಗೂ ನನ್ನ ಅನೇಕ ಯುವ ಮಿತ್ರರು ನಿರೋದ್ಯೋಗಿ ಆಗಿದ್ದು ಈ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಈ ಆಡಳಿತ ಮಂಡಳಿಗೆ ಕೇಳಿಕೊಳ್ಳುವುದೇನೆಂದರೆ ಈ ಒಂದು ಸ್ಥಳೀಯ ಯುವಕರಿಗೆ ಈ ಕಾರ್ಖಾನೆಯಲ್ಲಿ ಉದ್ಯೋಗ ಕೊಟ್ಟು, ಅದೇ ರೀತಿ ಸರಕು ಸಾಗಣೆ ವಾಹನಗಳಿಗೆ ಕೆಲಸ ಕೊಡುವುದು ಮತ್ತು ಅಂಗಡಿ, ಸಣ್ಣ ಹೋಟೇಲಗಳನ್ನು ಇಟ್ಟುಕೊಂಡ ಎಲ್ಲ ರೀತಿಯ ಕೆಲಸಗಳಿಂದ ರೈತರಿಗೆ ಅನೂಕೂಲವಾಗುತ್ತದೆ. ಅದಕ್ಕೆ ಆದಷ್ಟೂ ಬೇಗನೆ ಈ ಕಾರ್ಖಾನೆಗೆ ತಾವು ಅನುಮತಿಯನ್ನು ಕೊಟ್ಟು ಪ್ರಾರಂಭವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ವಲಯ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಧಾರವಾಡ** ಇವರು ಮಾತನಾಡುತ್ತಾ ಮೆ. ಸಾವಸನ್ ಡಿಸ್ಟಿಲ್ ಪ್ರೈವೇಟ್ ಲಿಮಿಟೆಡ್. ಇವರ ಒಂದು ಉದ್ದೇಶಿತ 100ಕೆ.ಎಲ್.ಪಿ.ಡಿ ಇಥನಾಲ್ ಮತ್ತು 3 ಮೆಗಾ ವ್ಯಾಟ ಕೋ–ಜನರೇಷನ ಹಾಗೆ ಪ್ರತಿ ದಿನಕ್ಕೆ 5 ಟನ್‌ನಷ್ಟು ಕಾರ್ನ ಆಯಿಲ್ ಮಾಡತಕ್ಕಂತಹ ಈ ಘಟಕದ ಬಗ್ಗೆ, ಈ ದಿನ ಪರಿಸರ ಕುರಿತು ಸಾರ್ವಜನಿಕ ಸಭೆಯನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ಮಾನ್ಯ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯದ 14/09/2006ರ ಗೆಜೆಟ್ ನೋಟಿಫಿಕೆಷನ್ ಪ್ರಕಾರ ನಡೆಸುತ್ತಾ ಇದ್ದೀವಿ. ಮುಖ್ಯವಾಗಿ ಈ ಒಂದು ಸಭೆಯಲ್ಲಿ ಪರಿಸರಕ್ಕೆ ಸಂಬಂಧಪಟ್ಟಂತಹ ಚರ್ಚಿಸತಕ್ಕಂತ ವಿಷಯಗಳನ್ನು ಚರ್ಚಿಸಬೇಕು. ಉದ್ದೇಶಿತ ಘಟಕದಿಂದ ಮಾಲಿನ್ಯ ಏನು ಆಗುತ್ತದೆ ಅದರಿಂದ ಯಾವ ರೀತಿ ತೊಂದರೆಗಳು ಆಗುತ್ತವೆ. ಅದನ್ನ ಉದ್ದಿಮೆದಾರರು ಯಾವ ರೀತಿ ಕಂಟ್ರೋಲ್ ಮಾಡುತ್ತಾರೆ. ಅದನ್ನು ಸಾರ್ವಜನಿಕರಿಗೆ ಮಾಹಿತಿ ನೀಡಿ, ಸಾರ್ವಜನಿಕರು ಇದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳುವುದಿದ್ದರೆ ಅಥವಾ ಅದರ ಬಗ್ಗೆ ಬೇರೆ ಏನಾದರೂ ಅನಿಸಿಕೆಗಳು ಇದ್ದಿದ್ದರೆ ಈ ಸಭೆಯ ಮೂಲಕ ಸರ್ಕಾರಕ್ಕೆ ತಿಳಿಸುವ ಒಂದು ಅವಕಾಶ ಇದು ಆಗಿತ್ತು. ಈ ಅವಕಾಶವನ್ನು ನಮ್ಮ ಭಾರತ ಸರ್ಕಾರದ ನೋಟಿಫಿಕೆಷನ್ನಲ್ಲಿ, ಬಹಳ ಸ್ಪಷ್ಟವಾಗಿ ನಮೂದಿಸಿರುತ್ತಾರೆ ಈ ಒಂದು ಸಭೆಯಲ್ಲಿ ಸುಮಾರು 09 ಜನ ಸಾರ್ವಜನಿಕರು ಭಾಗವಹಿಸಿ ತಮ್ಮ ಸಲಹೆಗಳನ್ನು ನೀಡಿರುತ್ತಾರೆ ಅದರಲ್ಲಿ ಮುಖ್ಯವಾಗಿ ಠಕ್ಕನ್ನವರ ಅಡ್ವೋಕೇಟ್ ಕೊಕಟನೂರು, ಅವರು ನೋಟಿಫಿಕೆಷನದಲ್ಲಿ ಇರತಕ್ಕಂತಹ ಒಂದು ನಿರ್ದೇಶನವನ್ನು ತಮ್ಮೆಲ್ಲರ ಗಮನಕ್ಕೆ ಈ ಸಭೆಯ ಮುಖಾಂತರ ತಿಳಿಸಿದ್ದಾರೆ. ಮುಖ್ಯವಾಗಿ ಅದರಲ್ಲಿ ಹೇಳುವದೇನೆಂದರೆ ಈ ಸಭೆಯಲ್ಲಿ ಏನ್ ಏನ್ ಚರ್ಚೆ ಆಗುತ್ತಾ ಇದೆ ಆ ಚರ್ಚೆಗಳನ್ನು ನಾವು ಲಿಖಿತ ರೂಪದಲ್ಲಿ ಸರ್ಕಾರಕ್ಕೆ ವರದಿಯನ್ನು ಕೊಡುತ್ತೇವೆ. ಪ್ರೊಸಿಡಿಂಗ ಮಾಡಿಕೊಂಡು, ಇಲ್ಲಿ ಏನೂ ಚರ್ಚೆ ಆಗುತ್ತಾ ಇದೆ, ಏನ್ ಪ್ರೊಸಿಡಿಂಗ ಆಗುತ್ತಾ ಇದೆ, ಅಂತಹದನ್ನು ವಿಡಿಯೋ ರಿಕಾರ್ಡಿಂಗ ಮಾಡಿಸುತ್ತಾ ಇದ್ದೀವಿ. ವಿಡಿಯೋ ರಿಕಾರ್ಡಿಂಗ ಪ್ರತಿಯನ್ನು ಸಹ ನಾವು ಸರ್ಕಾರಕ್ಕೆ ಕಳುಹಿಸಿ ಕೊಡುತ್ತಾ ಇದ್ದೀವಿ. ಹಾಗೆ ಒಂದು ವಿಡಿಯೋ ರಿಕಾರ್ಡಿಂಗ ಪ್ರತಿಯನ್ನು ಬೇಕಿದ್ದರೆ ಯಾರಿಗೆ ಬೇಕಾದರು ಅದನ್ನ ಆಮೇಲೆ ಪಡೆದು ಕೊಳ್ಳುವುದಕ್ಕೆ ಅವಕಾಶ ಇರುವುದರಿಂದಾ, ಇದರಲ್ಲಿ ನಾವು ಏನು ಪ್ರೊಸಿಡಿಂಗ್ ಮಾಡಿದ್ದೇವೆ ಆಮೇಲೆ ಸೈನ್ ಆಯಿತು, ಅದರಲ್ಲಿ ಏನು ಚೇಂಜಸ್ ಆಯಿತು ಅನ್ನುವ ಭಾವನೆಯು ಯಾರಲ್ಲಿ ಇರುವುದು ಬೇಡ. ಎಲ್ಲಾ ಪ್ರೊಸಿಡಿಂಗ್ ಸಹ ಇಲ್ಲಿ ಆಡಿಯೋ, ವಿಡಿಯೋ ರಿಕಾರ್ಡಿಂಗ ಆಗುತ್ತಾ ಇದೆ, ಇದರಲ್ಲಿ ಯಾವುದೇ ರೀತಿಯ ಚೆಂಜಸ್ ಮಾಡಲಿಕ್ಕೆ ಅವಕಾಶ ಇರುವುದಿಲ್ಲಾ ಎಂದು ತಮಗೆ ಭರವಸೆಯನ್ನು ನೀಡಲಿಕ್ಕೆ ಬಯಸುತ್ತಾ ಇದ್ದೇನೆ. ಹಾಗೆ ಉಳಿದ 08 ಜನ ಸಾರ್ವಜನಿಕರು ಈ ಒಂದು ಉದ್ದೇಶಿತ ಉದ್ದಿಮೆಗೆ ಬೇಗ ಒಂದು ಅಪ್ರುವಲ್ ಕೊಡಬೇಕು. ಇದರಿಂದ ಸ್ಥಳೀಯ ಮಟ್ಟದಲ್ಲಿ ಹೆಚ್ಚಿನ ಒಂದು ಆರ್ಥಿಕ ಬಲ ಬರುತ್ತದೆ, ಸ್ಥಳೀಯರಿಗೆ ಹೆಚ್ಚಿನ ಉದ್ಯೋಗವಕಾಶಗಳು ಲಭಿಸುತ್ತವೆ. ಹಾಗೆ ಭೂಮಿಗೂ ಸಹ ಒಂದು ಒಳ್ಳೆಯ ಬೆಲೆ ಬರತಕ್ಕಂತಹ ಮಾತನ್ನು ಸಭೆಯ ಮುಂದೆ ಅವರು ಇಟ್ಟಿದ್ದಾರೆ. ಸ್ಥಳಿಯವಾಗಿ ಹೆಚ್ಚಿನ ಜನರಿಗೆ ಎಂಪ್ಲಾಯಮೆಂಟ್‌ಗೆ ಹೆಚ್ಚಿನ ಅವಕಾಶ ನೀಡಬೇಕೆಂಬ ಮನವಿ ಸಹ ಅವರು ಸಲ್ಲಿಸಿರುತ್ತಾರೆ. ಇದರ ಬಗ್ಗೆ ನಾವು ಉದ್ದಿಮೆಯ ಅಧ್ಯಕ್ಷರಿಗೆ ಸೂಕ್ತ ವಿವರಣೆಯನ್ನು ಸಾರ್ವಜನಿಕರಿಗೆ ನೀಡಬೇಕೆಂದು ವಿನಂತಿಸುತ್ತೇನೆ. ವಿಶ್ವನಾಥ ತೆಲಸಂಗರವರು ಒಂದು ಸಲಹೆಯನ್ನು ನೀಡಿರುತ್ತಾರೆ ಅದು ನಿಜವಾಗಿಯು ಒಳ್ಳೆಯ ಸಲಹೆ. ಅದನ್ನು ನಾವು ಪಾಲಿಸಲೇಬೇಕು ZLD ಯನ್ನು ಯಾವತ್ತು ಕಂಟಿನ್ಯೂ ಆಗಿ ನಡೆಸಿಕೊಂಡು ಹೋಗಬೇಕು. ZLD ಅಂದರೆ Zero Liquid Discharge Technology ಯನ್ನು ಬಳಸಿಕೊಂಡು ಉದ್ದಿಮೆಯಿಂದ ಬರತಕ್ಕಂತಹ ಯಾವುದೇ ರೀತಿಯಾದಂತಹ ಒಂದು

Effluent Dischargeಗೆ ಅದನ್ನು ಕಂಪ್ಲೀಟ ಆಗಿ ಮರು ಬಳಕೆ ಮಾಡಿಕೊಳ್ಳಬೇಕು. ಅಂತಹ ಒಂದು ಟೆಕ್ನಾಲೊಜಿಯನ್ನು ಅವರು ಅಳವಡಿಸಿಕೊಳ್ಳಬೆಕೆಂಬ ಕಂಡಿಶನ್ ಇರುವುದರಿಂದ ಅವರು ಸದರಿ ಟೆಕ್ನಾಲಜಿ ಅಳವಡಿಸಿಕೊಳ್ಳಬೇಕು. ಸದರಿ ಪ್ರಸ್ತಾವನೆಯನ್ನು ಅಳವಡಿಸಿಕೊಂಡು ಮುಂದೆ ಯಾವ ರೀತಿ ಕಾರ್ಯಗತವಾಗುತ್ತದೆ ಎನ್ನುವುದನ್ನು ನಮ್ಮ ಜಿಲ್ಲಾ ಮಟ್ಟದ ಪರಿಸರ ಅಧಿಕಾರಿಗಳು ಮೆಲಿಂದ ಮೇಲೆ ಭೇಟಿ ಮಾಡಿಕೊಂಡು ಅದರ ಬಗ್ಗೆ ನಿಗಾ ಇಟ್ಟಿರುತ್ತಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈ ಉದ್ದಿಮೆಯಿಂದಾ ಉಂಟಾಗತಕ್ಕಂತಹ ಪರಿಸರ ಮಾಲಿನ್ಯವನ್ನು ಯಾವ ರೀತಿಯಾಗಿ ಕಂಟ್ರೊಲ ಮಾಡಬಹುದು, ನಿಗದಿತ ಮಾನಕ್ಕಿಂತ ಕಡಿಮೆ ಮಟ್ಟದಲ್ಲಿ ಯಾವ ರೀತಿಯಾಗಿ ಕಂಟ್ರೋಲ್ ಮಾಡಬಹುದು ಅನ್ನುವುದಕ್ಕೆ ವಿವರಗಳನ್ನು Environmental ಕನ್ಸಲ್ಟಂಟ ರವರು ತಮ್ಮ ಮುಂದೆ ಈಗಾಗಲೇ ಇಟ್ಟಿದ್ದಾರೆ ಆದಾಗ್ಯೂ ಸಹಾ ಈ ಒಂದು ವಿವರಣೆಯ ಬುಕ್ಲೆಟ್‌ನ್ನು ನಮ್ಮ ಜಗದೀಶ ಅವರು ಹೇಳಿದ ರೀತಿಯಲ್ಲಿ ಬೇರೆ ಬೇರೆ ಎಲ್ಲಾ ಕಛೇರಿಗಳಲ್ಲಿ ಸಹ ಸಾರ್ವಜನಿಕರ ಅವಗಾಹಣೆಗಾಗಿ ಇಟ್ಟಿದ್ದರು. ಸ್ಥಳೀಯವಾಗಿ ಇರತಕ್ಕಂತಹ ಜನರಿಗೆ, ಇರತಕ್ಕಂತಹ ಸಮಸ್ಯೆಗಳ ಬಗ್ಗೆ ಒಂದು ಮಾಹಿತಿ ಇರುತ್ತದೆ. ಅವರ ಒಂದು ಅನುಭವಗಳನ್ನು ಅಥವಾ ಅನಿಸಿಕೆಗಳನ್ನು ಪಡೆದುಕೊಂಡ ಮೇಲೆ, ಕರಡು ಪ್ರತಿಯನ್ನು ಒಂದು Final Report ಆಗಿ ಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡುವ ಉದ್ದೇಶ ಈ 14/09/2006ದ ನೋಟಿಫಿಕೇಶನ್‌ದಲ್ಲಿರುತ್ತದೆ. ಈ ಸಾರ್ವಜನಿಕ ಸಭೆಯಲ್ಲಿ ತಾವು ಭಾಗವಹಿಸಿದ್ದಕ್ಕೆ ವಂದನೆಗಳನ್ನು ಹೇಳುತ್ತೇನೆ. ಅದೇ ರೀತಿ ಈ ಒಂದು ಸಭೆಯಲ್ಲಿ ವ್ಯಕ್ತವಾಗಿರುವಂತಹ ವಿಷಯಗಳ ಕುರಿತು Environmental Consultant ಗಳಾಗಲೀ ಅಥವಾ ಉದ್ದಿಮೆಯ ಅಧ್ಯಕ್ಷರಾಗಲಿ ತಮಗೆ ವಿವರಣೆಯನ್ನು ನೀಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಉದ್ದಿಮೆಯ ಅಧ್ಯಕ್ಷರು** ಮಾತನಾಡುತ್ತಾ ಕೊಕಟನೂರು ಹದ್ದಿನಲ್ಲಿ ಪ್ರಾರಂಭ ಮಾಡತಕ್ಕಂತಹ ಈ ಒಂದು ಇಥೆನಾಲ್ ಘಟಕವನ್ನು ಅಥಣಿಯ ಪೂರ್ವ ಭಾಗದಲ್ಲಿ ಒಂದು ಯಾವುದಾದರು ಕಾರ್ಖಾನೆಯನ್ನು ಮಾಡಬೇಕು, ಈ ಭಾಗದಲ್ಲಿ ಇರತಕ್ಕಂತಹ ನಮ್ಮ ರೈತರಿಗೆ ಸಂಪೂರ್ಣವಾಗಿ ಇದು ಸಹಕಾರಿಯಾಗಬೇಕು ಎಂಬ ಉದ್ದೇಶ ಇಟ್ಟುಕೊಂಡು, ಗೊಂಜಾಳದಿಂದ ಎಥಿನಾಲ್ ಮತ್ತು ಅದರ ಜೊತೆಗೆ ತಮ್ಮ ದನಕರುಗಳಿಗೆ ಆಹಾರವನ್ನು, ಸಹ-ವಿದ್ಯುತ ಘಟಕವನ್ನು ಅದರ ಜೋತೆಗೆ ಗೋವಿನ ಜೋಳದಲ್ಲಿ ಬರತಕ್ಕಂತಹ ಎಣ್ಣೆಯನ್ನು ತೆಗೆದು ವಿತರಣೆ ಮಾಡತಕ್ಕಂತಹ ಒಂದು ಘಟಕ. ಬಹುಶಃ ನನ್ನ ಪ್ರಕಾರ ಇವತ್ತೀನ, ಸುಮಾರು 500 ಜನರಿಗೆ ಉದ್ಯೋಗವಕಾಶ ಕೊಡಲಿಕ್ಕೆ ಸಾಧ್ಯ ಇದೆ. ಬಹುತೇಕವಾಗಿ ಈ ಒಂದು ಕಾರ್ಖಾನೆಯಲ್ಲಿ ಏನು ಉದ್ಯೋಗ ಸೃಷ್ಠಿ ಆಗುತ್ತದೆ ಈ ಭಾಗದಲ್ಲಿಯೇ ಒಂದು ಆದ್ಯತೆ ಕೊಡುವುದರ ಮುಖಾಂತರ ಅವರ ವಿದ್ಯಾರ್ಹತೆ ಅನುಗುಣವಾಗಿ ಸ್ಥಳೀಯರಿಗೆ ಮೊದಲು, ಮೊದಲನೇ ಆದ್ಯತೆ ಕೊಡತಕ್ಕಂತಹ ಕೆಲಸವನ್ನು ಮಾಡಬೇಕು. ಈ ಕೋವಿಡ್-19 ಬಂದ ಮೇಲೆ ನಮ್ಮ ತಾಲ್ಲೂಕಿನಲ್ಲಿ ಇರತಕ್ಕಂತಹ ಅನೇಕ ವಿದ್ಯಾವಂತ ಜನಾ ಬೇರೆ ಜಿಲ್ಲೆಗಳಿಗೆ, ಬೇರೆ ರಾಜ್ಯಗಳಿಗೆ, ವಿದೇಶಗಳಿಗೆ ಹೋಗಿ ಉದ್ಯೋಗಗಳನ್ನು ಮಾಡತಕ್ಕಂತಹ ಒಂದು ಸಂದರ್ಬದಲ್ಲಿ ಕೋವಿಡ್-19 ಬಂದ ಮೇಲೆ ಅನೇಕ ತೊಂದರೆಯನ್ನು ಅನುಭವಿಸಿ, ಅನೇಕ ತಾಪತ್ರಯಗಳನ್ನು ಉಂಡು ಮತ್ತೆ ಮರಳಿ ಗೂಡಿಗೆ ಬಂದಿದ್ದೀರಿ. ಅಂತಹ ಸಂದರ್ಭ ಪುನಾವರ್ತನೆ ಆಗಬಾರದು, ನಮ್ಮ ತಾಲ್ಲೂಕದಲ್ಲಿ ಇರತಕ್ಕಂತಹ ನಮ್ಮ ಭಾಗದಲ್ಲಿ ಇರತಕ್ಕಂತಹ ಯಾವ ವಿದ್ಯಾರ್ಥಿಗಳು ಹೊರಗಡೆ ಅವರನ್ನು ಕಳುಹಿಸುವ ಬದಲು ಇದೇ ಕಾರ್ಖಾನೆಯಲ್ಲಿ ಅವರಿಗೆ ಕೆಲಸವನ್ನು ಕೊಟ್ಟು ಅವರನ್ನು ಸಾವಲಂಬಿ ಬದುಕನ್ನು ಕೊಡವಂತಹ ಕೆಲಸವನ್ನು ಖಂಡಿತವಾಗಿ ಈ ಸಂಸ್ಥೆಯಿಂದ ಮಾಡಿಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಕೆಲವೂಂದು ಜನರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ ಪರಿಸರಕ್ಕೆ ಹಾನಿ ಆಗಬಾರದೆಂದು, ನಾವು ಇದೇ ಪರಿಸರದಲ್ಲಿ ಇರತಕ್ಕಂತವರು ನನಗೆ ಹಾನಿ ಅದರೂ ಅಷ್ಟೆ ಮತ್ತು ಬೇರೆಯವರಿಗೆ ಹಾನಿ ಆದರೂ ಅಷ್ಟೆ. ಪರಿಸರವನ್ನು ಕಾಯ್ದುಕೊಂಡು ಹೋಗುವಂತದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ಪರಿಸರವನ್ನು ಕಾಯ್ದುಕೊಳ್ಳುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಕೊಟ್ಟಿರುವಂತಹ ಮಾರ್ಗದರ್ಶಿಗಳನ್ನು ಕಡ್ಡಾಯವಾಗಿ ಶೇಕಡಾ 100 ರಷ್ಟು ಅಳವಡಿಸಿ ಈ ಭಾಗದಲ್ಲಿ ಇರತಕ್ಕಂತಹ ಯಾವುದೇ ಪರಸರಕ್ಕೆ ಹಾನಿಯಾಗದ ರೀತಿಯಲ್ಲಿ ಆ ಕಾರ್ಯವನ್ನು ಯಥಾ ಸಿತ್ಥಿಯಲ್ಲಿ ತರುತ್ತೇವೆ. ಅಂಥ ಈ ಸಭೆಯಲ್ಲಿ ನಾನು ತಮಗೆ ತಿಳಿಸುತ್ತೇನೆ. ಅದರ ಜೊತೆಗೆ ಇದಕ್ಕೆ ಬೇಕಾದಂತಹ ಗೋವಿನ ಜೋಳ, ಈ ಭಾಗದ ಎಲ್ಲಾ ರೈತರು ಗೋವಿನ ಜೋಳ ಬೆಳಿದಿರತಕ್ಕಂತವರು, ಗೋವಿನ ಜೋಳ ಮಾರಾಟವನ್ನು ಮಹಾರಾಷ್ಟ್ರ ಮಾರುಕಟ್ಟೆಗೆ

ಕಳುಹಿಸುವ ಮುಖಾಂತರ ನಮಗೆ transportation ವೆಚ್ಚು ನಮ್ಮ ಮೇಲೆ ಹೊರೆ ಬೀಳುತ್ತಿತ್ತು. ಒಂದು ಕ್ವಿಂಟಲ್ ಗೋವಿನ ಜೋಳ ಸಾಂಗ್ಲಿಗೆ ಕಳಹಿಸಿಬೇಕಾದರೆ ಸುಮಾರು 50 ರಿಂದ 60 ರೂ ವೆಚ್ಚ ಬರುತ್ತದೆ. ಸಾಂಗ್ಲಿಯಲ್ಲಿ ಮಾರಿದರೆ 50 ರಿಂದ 60 ರೂ ರೈತರಿಗೆ ಕಡಿಮೆ ದರ ಸಿಗುವಂತಹ ಸನ್ನಿವೇಶ ಇದೆ. ನನ್ನ ಮೊದಲನೆ ಆದ್ಯತೆ ನಮ್ಮ ತಾಲ್ಲೂಕಿನಲ್ಲಿ ಬೆಳದಿರತಕ್ಕಂತಹ ಎಲ್ಲಾ ಗೋವಿನ ಜೋಳವನ್ನು ಯೋಗ್ಯ ಬೆಲೆ ಕೊಟ್ಟು ಆ ಒಂದು ಹೊರೆಯನ್ನು ಕಡಿಮೆ ಮಾಡಿ ನಾವು ಖರೀದಿ ಮಾಡತಕ್ಕಂತಹ ಕೆಲಸವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಈ ಕಾರ್ಖಾನೆಯನ್ನು ಮಾಡತಕ್ಕಂತ ಸಂದರ್ಭದಲ್ಲಿ ಎಲ್ಲರೂ ನಮ್ಮ ಜೊತೆ ಕೈ ಜೋಡಿಸಬೇಕು. ನಿವೆಲ್ಲರೂ ನನ್ನ ಜೊತೆಗೆ ಇರಬೇಕು, ಈ ಕಾರ್ಖಾನೆಯನ್ನು ನಿರ್ಮಾಣ ಮಾಡಿ ಈ ಭಾಗದಲ್ಲಿ ಒಂದು ಉದ್ಯೋಗ ಕೊಡುತಕ್ಕಂತಹ, ರೈತರಿಗೆ ಲಾಭದಾಯಕವಾಗಿರುವಂತೆ ಬೆಳೆಗೆ ಬೆಲೆ ಕೊಡತಕ್ಕದ್ದು ಮತ್ತು ಈ ಕಾರ್ಖಾನೆಯಿಂದ ನಿಮಗೆ ಎಳ್ಳಷ್ಟು ಸಂಶಯ ಬೇಡ. ಏಕೆಂದರೆ ಇದು ಗೋವಿನ ಜೋಳದಿಂದ ಮಾಡತಕ್ಕ Ethanol ಮತ್ತು ಅದರಲ್ಲಿ ಬರತಕ್ಕಂತಹ ಎಣ್ಣೆ ಮತ್ತು Co-gen ವನ್ನು ಮತ್ತು ಇನ್ನುಳಿದಿರುವಂತಹ ಖಾದ್ಯವನ್ನು ನಮ್ಮ ದನಕರುಗಳಿಗೆ ಕೊಡತಕ್ಕಂತಹ ಕೆಲಸವನ್ನು ಮಾಡುವುದು. ಯಾವುದೇ ತರಹ ಜನರಿಗೆ, ಸಾರ್ವಜನಿಕರಿಗೆ, ಪರಿಸರಕ್ಕೆ ದಕ್ಕೆಯಾಗದ ರೀತಿ ಕೆಲಸವನ್ನು ಖಂಡಿತವಾಗಿ ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಮ್ಮೆಲ್ಲರ ಮುಂದೆ ಭರವಸೆಯನ್ನು ಕೊಡುತ್ತೇನೆ.

********

**ಶ್ರೀ. ಅಶೋಕ ದುಡಗುಂಟಿ, ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ** ಇವರು ಮಾತನಾಡುತ್ತಾ ಅಥಣಿ ತಾಲ್ಲೂಕಿನ ಕೊಕಟನೂರು ಗ್ರಾಮದಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆ ಮೆ: Savson Distil Pvt Ltd ರವರ 100 KLPD ethanol, 3 MW ಸಹ–ವಿದ್ಯುತ ಘಟಕ ಮತ್ತು 5 TPD corn oil ಘಟಕಗಳ ಸ್ಥಾಪನೆಯ ಕುರಿತಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲಾಯಿತು. ಎಲ್ಲಾ ಸಾರ್ವಜನಿಕರು, ರೈತರು ಹಾಗೂ ಉದ್ದೇಶಿತ ಉದ್ದಿಮೆದಾರರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತೀರಿ. ಈಗಾಗಲೇ ನಮ್ಮ ವಲಯ ಹಿರಿಯ ಪರಿಸರ ಅಧಿಕಾರಿಗಳು ಕೂಡಾ 08 ರಿಂದ 09 ಜನ ರೈತರು, ಸಾರ್ವಜನಿಕರು ವ್ಯಕ್ತಪಡಿಸಿದ ಅನಿಸಿಕೆಗಳ ಬಗ್ಗೆ ಕೂಡಾ ಸ್ಪಷ್ಟೀಕರಣವನ್ನು ನೀಡಿದ್ದಾರೆ ಹಾಗೂ ಸದರಿ ಸಭೆಯ video ಚಿತ್ರೀಕರಣ ಕೂಡಾ ಆಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಾವು ಶೀಘ್ರದಲ್ಲಿ ಪರಿಸರ ಮಂತ್ರಾಯದ ಕೇಂದ್ರ ಕಛೇರಿಗೆ, ಈ ವಸ್ತುನಿಷ್ಟ ವರದಿಯನ್ನು ಕೂಡಲೇ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

(ಶ್ರೀ. ಅಶೋಕ ದುಡಗುಂಟಿ. ಕ.ಆ.ಸೇ.)
**ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು ಬೆಳಗಾವಿ, ಕರ್ನಾಟಕ**